# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1166 (1323)
ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರು(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 22.08.2025
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆಯ ಅಧಿಕಾರವನ್ನು ಗ್ರಾಮ ಪಂಚಾಯಿತಿಯಿಂದ ಸ್ಥಳೀಯ ನಗರ ಯೋಜನೆ ಪ್ರಾಧಿಕಾರಗಳಿಗೆ ಹಸ್ತಾಂತರಿಸಿದ ನಂತರ ಸದರಿ ಪ್ರಾಧಿಕಾರಗಳಿಗೆ ಸಲ್ಲಿಕೆಯಾದ ಅರ್ಜಿಗಳು ಎಷ್ಟು; ಅನುಮೋದಿಸಲಾದ, ತಿರಸ್ಕರಿಸಲಾದ ಮತ್ತು ಬಾಕಿ ಇರುವ ಅರ್ಜಿಗಳು ಎಷ್ಟು; ಸದರಿ ಅರ್ಜಿಗಳ ವಿಲೇವಾರಿಗೆ 5 ರಿಂದ 6 ತಿಂಗಳು ಕಾಯಬೇಕಾದ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆಯ ಅಧಿಕಾರವನ್ನು ಗ್ರಾಮ ಪಂಚಾಯಿತಿಯಿಂದ ಸ್ಥಳೀಯ ನಗರ ಯೋಜನೆ ಪ್ರಾಧಿಕಾರಗಳಿಗೆ ಹಸ್ತಾಂತರಿಸಿದ ನಂತರ ಸದರಿ ಪ್ರಾಧಿಕಾರಗಳಿಗೆ ಸಲ್ಲಿಕೆಯಾದ ಅರ್ಜಿಗಳ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| (ಆ) | ಸಾರ್ವಜನಿಕರ ವಿನ್ಯಾಸ ನಕ್ಷೆ ಅನುಮೋದನೆ ಅರ್ಜಿಗಳ ವಿಲೇವಾರಿಗೆ ನಗರಾಭಿವೃದ್ಧಿ ಇಲಾಖೆಯೊಂದಿಗೆ ಸಮನ್ವಯ ಮತ್ತು ಮೇಲುಸ್ತುವಾರಿಗೇ RDPR ಇಲಾಖೆಯಿಂದ ಕೈಗೊಂಡ ಕ್ರಮಗಳೇನು; | ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮೀಣ ಪ್ರದೇಶಗಳಲ್ಲಿ ವಿನ್ಯಾಸ ಅನುಮೋದನೆಗಳನ್ನು ಏಕಗವಾಕ್ಷಿ ವ್ಯವಸ್ಥೆ ಮೂಲಕ ನೀಡಲು ತಂತ್ರಾಂಶವನ್ನು ತಯಾರಿಸಲಾಗುತ್ತಿದೆ. |
| (ಇ) | ರಾಜ್ಯದ ಗ್ರಾಮೀಣ ಭಾಗದಲ್ಲಿರುವ ಜಮೀನುಗಳ ಅಭಿವೃದ್ಧಿಗೆ ಪ್ರತ್ಯೇಕವಾಗಿ ಗ್ರಾಮಾಂತರ ಯೋಜನಾ ಅಧಿನಿಯಮವನ್ನು ಜಾರಿಗೊಳಿಸಿ ಸದರಿ ವಿನ್ಯಾಸ ಅನುಮೋದನೆಗೆ ಗ್ರಾಮ ಪಂಚಾಯಿತಿಗಳಲ್ಲಿ ಅವಕಾಶ ಕಲ್ಪಿಸಿ ಗ್ರಾಮೀಣ ಭಾಗದ ಜನರು ನಗರ ಪ್ರದೇಶಗಳಿಗೆ ಅಳೆಯುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮವೇನು; | ಕರಾವಳಿ ಭಾಗದಲ್ಲಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯಿಂದ ಜಿಲ್ಲಾ ಕೇಂದ್ರದವರೆಗೆ ಸಾರ್ವಜನಿಕರು ಸಂಪರ್ಕ ಹೊಂದುವ ಸಮಸ್ಯೆಯನ್ನು ನಿವಾರಿಸಲು ಜಿಲ್ಲೆಯಲ್ಲಿ ವಿವಿಧ ಯೋಜನಾ ಪ್ರಾಧಿಕಾರಗಳಲ್ಲಿ ನಿರ್ವಹಿಸುತ್ತಿರುವ ಕಾರ್ಯನಿರ್ವಹಿಸುತ್ತಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸುವ ಸಂಬಂಧ ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ಹಾಗೂ 76-ಕೆ ರಡಿ ಪ್ರದತ್ತವಾದ ಅಧಿಕಾರದನ್ವಯ, ಸ್ಥಳೀಯ |

| | | |
|---|---|---|
| | | ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ಅನುಮೋದನೆ ನೀಡುವ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 292 ಮೈಅಪ್ರಾ 2024, ದಿನಾಂಕ:07.08.2024 ರಂತೆ ತಾಂತ್ರಿಕ ಅನುಮೋದನೆ ನೀಡಲು ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ(ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ)<br><br>ಮುಂದುವರೆದು, ತಾಲ್ಲೂಕು ಪಂಚಾಯತಿ ಕಛೇರಿಯಲ್ಲಿಯೇ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಹಿಸಲು ಆದೇಶಿಸಲಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ, ಸದರಿ ಅರ್ಜಿಗಳನ್ನು ಕಾಲಮಿತಿಯೊಳಗೆ / ತ್ವರಿತವಾಗಿ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ. |
| (ಈ) | ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿರುವ ನಗರ ವಿನ್ಯಾಸಕರಂತೆ ಗ್ರಾಮೀಣ ಭಾಗದ ಅಭಿವೃದ್ಧಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣ ಸಂಖ್ಯೆ 113ಎ ರಡಿ ಪಂಚಾಯತ್ ರಾಜ್ ಇಲಾಖೆಯಡಿ ವಿನ್ಯಾಸಕಾರರನ್ನು ನೇಮಕಾತಿಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು; | ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿರುವ ನಗರ ವಿನ್ಯಾಸಕರಂತೆ ಗ್ರಾಮೀಣ ಭಾಗದ ಅಭಿವೃದ್ಧಿಗೆ ವಿನ್ಯಾಸಕಾರರನ್ನು ನೇಮಕಾತಿಗೊಳಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ.<br><br>ಗ್ರಾಮೀಣ ಜನರ ಅಲೆದಾಟ ತಪ್ಪಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ಹಾಗೂ 76-ಕೆ ರಡಿ ಪ್ರದತ್ತವಾದ ಅಧಿಕಾರದನ್ವಯ, ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ಅನುಮೋದನೆ ನೀಡುವ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 292 ಮೈಅಪ್ರಾ 2024, ದಿನಾಂಕ:07.08.2024 ರಂತೆ ತಾಂತ್ರಿಕ ಅನುಮೋದನೆ ನೀಡಲು ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ. |
| (ಉ) | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ಗ್ರಾಮೀಣ ಜನರ ಅಲೆದಾಟ ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?(ಮಾಹಿತಿ ನೀಡುವುದು) | |

ಕಡತ ಸಂಖ್ಯೆ: ನಅಇ 402 ಮೈಅಪ್ರಾ 2025

(ಬಿ.ಎಸ್.ಸುರೇಶ)

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

## ಅನುಬಂಧ-1

| ಪ್ರಾಧಿಕಾರದ ಹೆಸರು | ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ | ಅನುಮೋದಿಸಲಾದ ಅರ್ಜಿಗಳ ಸಂಖ್ಯೆ | ಹಿಂಬರಹ ನೀಡಿರುವ ಅರ್ಜಿಗಳ ಸಂಖ್ಯೆ | ತಿರಸ್ಕರಿಸಲಾದ ಅರ್ಜಿಗಳ ಸಂಖ್ಯೆ | ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|---|
| **ಉಡುಪಿ ಜಿಲ್ಲೆ** | | | | | |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ. | 1247 | 544 | 391 | 209 | 103 |
| ನಗರ ಯೋಜನಾ ಪ್ರಾಧಿಕಾರ, ಕಾಪು | 917 | 668 | 14 | 21 | 214 |
| ನಗರ ಯೋಜನಾ ಪ್ರಾಧಿಕಾರ, ಕುಂದಾಪುರ | 1402 | 972 | - | 153 | 277 |
| **ಒಟ್ಟು** | **3566** | **2184** | **405** | **383** | **594** |
| **ದಕ್ಷಿಣ ಕನ್ನಡ ಜಿಲ್ಲೆ** | | | | | |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು. | 1098 | 411 | 522 | 155 | 10 |
| ನಗರ ಯೋಜನಾ ಪ್ರಾಧಿಕಾರ, ಮೂಡಬಿದ್ರೆ | 1918 | 704 | 764 | 347 | 103 |
| ನಗರ ಯೋಜನಾ ಪ್ರಾಧಿಕಾರ, ಪುತ್ತೂರು. | 1726 | 807 | 521 | 147 | 251 |
| ನಗರ ಯೋಜನಾ ಪ್ರಾಧಿಕಾರ, ಸುಳ್ಯ | 27 | 06 | 08 | 02 | 11 |
| ನಗರ ಯೋಜನಾ ಪ್ರಾಧಿಕಾರ, ಬಂಟ್ವಾಳ. | 2291 | 1748 | 313 | 131 | 99 |
| **ಒಟ್ಟು** | **7060** | **3676** | **2128** | **782** | **474** |

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

ಅನುಬಂಧ-2

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರಾವಳಿ ಭಾಗದಲ್ಲಿ 01 ಎಕರೆವರೆಗೆ ಏಕ ನಿವೇಶನ ವಿನ್ಯಾಸಗಳಿಗೆ ಅನುಮೋದನೆ ನೀಡುವ ಸಂಬಂಧ ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ.

**ಓದಲಾಗಿದೆ:** ಕರಾವಳಿ ಭಾಗದಲ್ಲಿ ಬರುವ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಸತಿ ಮತ್ತು ವಾಣಿಜ್ಯ ಭೂಪರಿವರ್ತಿತ ಜಮೀನುಗಳ ಏಕ ನಿವೇಶನ ವಿನ್ಯಾಸಗಳಿಗೆ ಅನುಮೋದನೆ ನೀಡುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿ: 25.07.2024 ರಂದು ಜರುಗಿದ ಸಭೆ.

*****

**ಪ್ರಸ್ತಾವನೆ:**

ದಿನಾಂಕ 12.8.2024 ಸ್ವೀಕೃತ

ಕರಾವಳಿ ಭಾಗದ ಶಾಸಕರು ಈ ಹಿಂದೆ 25 ಸೆಂಟ್ಸ್ ವಿಸ್ತೀರ್ಣವರೆಗಿನ ಜಮೀನುಗಳಿಗೆ ಗ್ರಾಮ ಪಂಚಾಯಿತಿಗಳಿಂದ; 25 ಸೆಂಟ್ಸ್ ಮೇಲ್ಪಟ್ಟು ಒಂದು ಎಕರೆವರೆಗಿನ ಜಮೀನುಗಳಿಗೆ ತಾಲ್ಲೂಕು ಪಂಚಾಯಿತಿಗಳಿಂದ; ಒಂದು ಎಕರೆ ಮೇಲ್ಪಟ್ಟ ವಿಸ್ತೀರ್ಣದ ಜಮೀನುಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ವಿನ್ಯಾಸಗಳಿಗೆ ಅನುಮೋದನೆ ಪಡೆದು ನಮೂನೆ 9 ಮತ್ತು 11 ಗಳನ್ನು ಈ ಹಿಂದೆ ನೀಡಲಾಗುತ್ತಿದ್ದ ಬಗ್ಗೆ ಸಭೆಗೆ ವಿವರಿಸಿ ಪ್ರಸ್ತುತ ಸರ್ಕಾರದಿಂದ ಹೊರಡಿಸಲಾಗಿರುವ ಆದೇಶದ ಹಿನ್ನಲೆಯಲ್ಲಿ ಮಿತಿ ಇಲ್ಲದೇ ಎಲ್ಲ ಜಮೀನುಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ವಿನ್ಯಾಸ ಅನುಮೋದನೆ ಪಡೆಯಬೇಕಾಗಿರುವುದರಿಂದ ಕರಾವಳಿ ಭಾಗದಲ್ಲಿನ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಕರಾವಳಿ ಭಾಗದಲ್ಲಿನ ಗ್ರಾಮಪಂಚಾಯಿತಿ ವ್ಯಾಪ್ತಿಯಿಂದ ಜಿಲ್ಲಾ ಕೇಂದ್ರದವರೆಗೆ ಸಾರ್ವಜನಿಕರು ಸಂಪರ್ಕ ಹೊಂದುವ ಸಮಸ್ಯೆಯನ್ನು ನಿವಾರಿಸಲು ಜಿಲ್ಲಾ ಕೇಂದ್ರದೊಂದಿಗೆ ಜಿಲ್ಲೆಯಲ್ಲಿ ವಿವಿಧ ಯೋಜನಾ ಪ್ರಾಧಿಕಾರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸುವುದರೊಂದಿಗೆ ಯೋಜನಾ ಪ್ರಾಧಿಕಾರಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ತೀರ್ಮಾನಿಸಲಾಗಿರುತ್ತದೆ.

ಸದರಿ ಸಭೆಯ ತೀರ್ಮಾನದಂತೆ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಕಾರ್ಯವ್ಯಾಪ್ತಿಯನ್ನು ನಿಗಧಿಪಡಿಸಲು ನಿರ್ಣಯಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ನಅಇ 292 ಮೈಅಪ್ರಾ 2024,

## ದಿನಾಂಕ:07.08.2024

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-K ಹಾಗೂ 76K ರಡಿ ಪ್ರದತ್ತವಾದ ಅಧಿಕಾರದನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ

ಪಂಚಾಯಿತಿ ವ್ಯಾಪ್ತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ಅನುಮೋದನೆ ನೀಡುವ ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ ನೀಡಲು ಈ ಕೆಳಕಂಡಂತೆ ಅಧಿಕಾರ ವ್ಯಾಪ್ತಿಯನ್ನು ನಿಗಧಿಪಡಿಸಿ ಆದೇಶಿಸಲಾಗಿದೆ.

| ದಕ್ಷಿಣ ಕನ್ನಡ ಜಿಲ್ಲೆ | | |
|---|---|---|
| **ಪ್ರಾಧಿಕಾರ/ ಕಛೇರಿ** | **ಹುದ್ದೆ** | **ವಿಸ್ತರಿಸಿರುವ ಕಾರ್ಯ ವ್ಯಾಪ್ತಿ** |
| ಬಂಟ್ವಾಳ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಬಂಟ್ವಾಳ | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಬಂಟ್ವಾಳ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರಗಳು /ಗ್ರಾಮ ಪಂಚಾಯಿತಿಗಳು |
| ಮೂಡಬಿದರೆ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಮೂಡಬಿದರೆ | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಮೂಡಬಿದರೆ ಮತ್ತು ಬೆಳ್ತಂಗಡಿ ತಾಲ್ಲೂಕುಗಳಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ಪುತ್ತೂರು ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಪುತ್ತೂರು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಪುತ್ತೂರು ಮತ್ತು ಸುಳ್ಯ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಮುಲ್ಕಿ, ಉಲ್ಲಾಳ ತಾಲ್ಲೂಕು ಹಾಗೂ ಮಂಗಳೂರು ತಾಲ್ಲೂಕಿನ (ಸ್ಥಳೀಯ ಯೋಜನಾ ಪ್ರದೇಶಕ್ಕೆ ಒಳಪಡದ) ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |

| ಉತ್ತರ ಕನ್ನಡ ಜಿಲ್ಲೆ | | |
|---|---|---|
| **ಪ್ರಾಧಿಕಾರ/ ಕಛೇರಿ** | **ಹುದ್ದೆ** | **ವಿಸ್ತರಿಸಿರುವ ಕಾರ್ಯ ವ್ಯಾಪ್ತಿ** |
| ಶಿರಸಿ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಶಿರಸಿ | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಶಿರಸಿ, ಹಳಿಯಾಳ ಮತ್ತು ದಾಂಡೇಲಿ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಕಾರವಾರ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಶಿರಸಿ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಯಲ್ಲಾಪುರ, ಮುಂಡಗೋಡ ಮತ್ತು ಸಿದ್ದಪುರ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |

| ಉಡುಪಿ ಜಿಲ್ಲೆ | | |
|---|---|---|
| **ಪ್ರಾಧಿಕಾರ/ ಕಛೇರಿ** | **ಅಧಿಕಾರ ಪ್ರತ್ಯಾಯೋಜಿಸಿರುವ ಅಧಿಕಾರಿ** | **ಅಧಿಕಾರ ಪ್ರತ್ಯಾಯೋಜಿಸಿರುವ ತಾಲ್ಲೂಕುಗಳು** |
| ಕುಂದಾಪುರ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಕುಂದಾಪುರ | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಕುಂದಾಪುರ ಮತ್ತು ಬೈಂದೂರು ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು . |
| ಕಾಪು ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು, ಕಾಪು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಕಾಪು ಮತ್ತು ಕಾರ್ಕಳ ತಾಲ್ಲೂಕಿಗೆ ಒಳಪಡುವ ಎಲ್ಲಾ ಪುರಸಭೆ ಯೋಜನಾ |

| | | |
|---|---|---|
| | | ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |
| ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | ಪ್ರಸ್ತುತ ಇರುವ ಕಾರ್ಯವ್ಯಾಪ್ತಿಗಳೊಂದಿಗೆ ಉಡುಪಿ, ಬ್ರಹ್ಮಾವರ ಹಾಗೂ ಹೆಬ್ರಿ ತಾಲ್ಲೂಕಿನ ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರ / ಗ್ರಾಮ ಪಂಚಾಯಿತಿಗಳು |

ಮೇಲ್ಕಂಡ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಒಳಪಡುವ ಪ್ರತಿ ತಾಲ್ಲೂಕಿನ ಕಾರ್ಯವಾಪ್ತಿಯ ಒಳಗಡೆ ಬರುವ ಪ್ರಕರಣಗಳನ್ನು ಸಕಾಲದಲ್ಲಿ ಇತ್ಯರ್ಥಗೊಳಿಸಲು ನಿರ್ದೇಶಿಸಿದೆ.

**ತಾಲ್ಲೂಕು ಪಂಚಾಯಿತಿ ಕ್ರಮ:**

ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಅಧಿಕಾರಿಗಳಿಗೆ ಕಾರ್ಯನಿರ್ವಹಿಸಲು ಅಗತ್ಯ ಸ್ಥಳಾವಕಾಶ, ಪೀ ಕಂಪ್ಯೂಟರ್, ಸಿಬ್ಬಂದಿ(ಕನಿಷ್ಠ 01 ಪ್ರಥಮ ದರ್ಜೆ ಸಹಾಯಕ/ದ್ವಿತೀಯ ದರ್ಜೆ ಸಹಾಯಕ ಹಾಗೂ 01 ಡಿ ಗ್ರೂಪ್ ನೌಕರ) ಒದಗಿಸುವುದು.

**ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಕ್ರಮ:**

1. ಕ್ರಮ ಕೈಗೊಂಡ ಕಡತದ ಒಂದು ಸಂಪೂರ್ಣ ಪ್ರತಿಯನ್ನು ತಮ್ಮ ಕಛೇರಿಯಲ್ಲಿಯೂ ಸಹ ನಿರ್ವಹಿಸುವುದು.
2. ಕ್ರಮ ಕೈಗೊಂಡ ಕಡತಗಳ ಮಾಸಿಕ ವರದಿಯನ್ನು ಮೈಸೂರು ವಿಭಾಗೀಯ ಕಛೇರಿಗೆ ಸಲ್ಲಿಸುವುದು.
3. ಮೈಸೂರು ವಿಭಾಗೀಯ ಕಛೇರಿಯು ಮಾಸಿಕ ವರದಿಯನ್ನು ಕ್ರೋಢೀಕರಿಸುವುದು.
4. ಮೈಸೂರು ವಿಭಾಗೀಯ ಕಛೇರಿಯು ಕಾಲಕಾಲಕ್ಕೆ ಕಛೇರಿ ತಪಾಸಣೆ ನಡೆಸಿ ಯಾವುದೇ ಕಡತ ಬಾಕಿ ಇಲ್ಲದಂತೆ ಖಾತರಿಪಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

**ಇವರಿಗೆ**

1. ಅಪರ ಮುಖ್ಯಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು, ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ,

**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಸದಸ್ಯರ ಹೆಸರು | ಶ್ರೀ ಡಿ. ಎಸ್ ಅರುಣ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 719 (880) |
| ಉತ್ತರಿಸಬೇಕಾದ ದಿನಾಂಕ | 19.08.2025 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆ ಸಂಬಂಧ ನಡೆದಿರುವ ಹಗರಣಗಳು ಯಾವುವು; (ವಿವರ ಒದಗಿಸುವುದು) | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಯಲ್ಲಿ ನಡೆದಿತ್ತು ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್ ಡಿ 87 ಪಿಸಿಇ 2024, ದಿನಾಂಕ: 14.07.2024 ರನ್ವಯ ಗೌರವಾನ್ವಿತ ಮಾನ್ಯ ನಿವೃತ್ತ ನ್ಯಾಯಾಧೀಶರಾದ ಶ್ರೀ ಪಿ.ಎನ್ ದೇಸಾಯಿ ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ವಿಚಾರಣಾ ಆಯೋಗ ರಚಿಸಲಾಗಿತ್ತು.<br><br>ಮಾನ್ಯ ಆಯೋಗದ ವಿಚಾರಣೆ ವ್ಯಾಪ್ತಿಗೆ ವಹಿಸಬಹುದಾದ ಪ್ರಕರಣಗಳ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 87 ಪಿಸಿಇ 2024, ದಿನಾಂಕ:23.07.2024 ರಲ್ಲಿ ಕಾರ್ಯವ್ಯಾಪ್ತಿ ಮತ್ತು ಷರತ್ತುಗಳನ್ನು (Terms of Reference) ನಿಗದಿಪಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).<br><br>ಗೌರವಾನ್ವಿತ ಮಾನ್ಯ ನಿವೃತ್ತ ನ್ಯಾಯಾಧೀಶರಾದ ಶ್ರೀ ಪಿ.ಎನ್ ದೇಸಾಯಿ ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ವಿಚಾರಣಾ ಆಯೋಗವು ಪ್ರಕರಣದ ಬಗ್ಗೆ ಸುದೀರ್ಘ ವಿಚಾರಣೆ ನಡೆಸಿ ವಿಸ್ತೃತ ವಿಚಾರಣಾ ವರದಿಯನ್ನು ದಿನಾಂಕ:30.07.2025 ರಂದು ಸಲ್ಲಿಸಿರುತ್ತದೆ. ಪ್ರಸ್ತುತ ವಿಚಾರಣಾ ವರದಿಯು ಪರಿಶೀಲನಾ ಹಂತದಲ್ಲಿರುತ್ತದೆ. |
| ಆ) | ಈ ಅಕ್ರಮ ಬಗ್ಗೆ ವಿಚಾರಣೆ ನಡೆಸಲು ಏಕ ಸದಸ್ಯ ವಿಚಾರಣೆ ಆಯೋಗಕ್ಕೆ ಸಮಯ ನಿಗದಿಪಡಿಸಲಾಗಿದೆಯೆ; | |
| ಇ) | ಪ್ರಸ್ತುತ ಸದರಿ ವಿಚಾರಣೆಗಳು ಯಾವ ಹಂತದಲ್ಲಿವೆ; | |
| ಈ) | ವಿಚಾರಣೆ ವ್ಯಾಪ್ತಿಗೆ ಒಳಪಟ್ಟಿರುವ ಪ್ರಕಾರಗಳು ಯಾವುವು; (ಹೆಸರು ಸರ್ವೆ ನಂಬರ್ ಸೈಟ್ ನಂಬರ್ ವಿವರಗಳೊಂದಿಗೆ ಮಾಹಿತಿ ಒದಗಿಸುವುದು; | |
| ಉ) | ಈ ಆಯೋಗವು ತನ್ನ ವರದಿಯನ್ನು ಯಾವ ಕಾಲ ಮಿತಿಯಲ್ಲಿ ಸಲ್ಲಿಸುವುದು? | |

ಸಂಖ್ಯೆ :ನಅಇ 368 ಮೈಅಪ್ರಾ 2025(ಇ)

**(ಬಿ.ಎಸ್ ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 764 (887) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.08.2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಿನ ಪ್ರದೇಶದಲ್ಲಿ ಮಹಾಯೋಜನೆ ರಚಿಲಾಗಿದೆಯೇ; ಮಹಾಯೋಜನೆ ರಚಿಸದೆ ಯಾವ ನಿಯಮಾವಳಿಗಳಂತೆ ನಿವೇಶನ ಬಡಾವಣೆ ನಕ್ಷೆ ಅನುಮೋದನೆ ನೀಡಲಾಗುತ್ತಿದೆ; | ರಾಜ್ಯದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗೆ ಮಹಾಯೋಜನೆಯನ್ನು ತಯಾರಿಸಲಾಗಿರುವುದಿಲ್ಲ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳನ್ನು ಯೋಜನಾಬದ್ಧವಾಗಿ ರೂಪಿಸುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 16 ಟಿಟಿಪಿ 2023(ಇ), ದಿನಾಂಕ:07-05-2025 ರನುಸಾರ ಅನುಮೋದನೆ ನೀಡಲಾಗುತ್ತಿದೆ. |
| (ಆ) | ಬಡಾವಣೆ ನಕ್ಷೆ ಅನುಮೋದನೆ ಕುರಿತು ನಗರಾಭಿವೃದ್ಧಿ ಇಲಾಖೆ ಪ್ರಕಟಿಸಿದ ನಿಯಮಗಳು ಗ್ರಾಮಠಾಣಾ ಕಲ್ಪನೆಯಿಲ್ಲದ ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿರುವ ತುಂಡು ಭೂಮಿ ಮತ್ತು ಹರಡಿಕೊಂಡಿರುವ ಜನವಸತಿ ನಿವೇಶನ ಬಡಾವಣೆ ನಕ್ಷೆ ಅನುಮೋದನೆ ಸಾಧ್ಯವಾಗದೆ ಸಾರ್ವಜನಿಕರು ತೊಂದರೆ ಪಡುತ್ತಿರುವ ಬಗ್ಗೆ ಇಲಾಖೆ ಏನು ಕ್ರಮವಹಿಸುತ್ತಿದೆ; | ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-K ಹಾಗೂ 76K ರಡಿ ಪ್ರದತ್ತವಾದ ಅಧಿಕಾರದನ್ವಯ, ಕರಾವಳಿ ಭಾಗದಲ್ಲಿನ ಗ್ರಾಮ . ಪಂಚಾಯಿತಿ ವ್ಯಾಪ್ತಿಯಿಂದ ಜಿಲ್ಲಾ ಕೇಂದ್ರದವರೆಗೆ ಸಾರ್ವಜನಿಕರು ಸಂಪರ್ಕ ಹೊಂದುವ ಸಮಸ್ಯೆಯನ್ನು ನಿವಾರಿಸಲು ಜಿಲ್ಲೆಯಲ್ಲಿ ವಿವಿಧ ಯೋಜನಾ ಪ್ರಾಧಿಕಾರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿಕಾರಿಗಳಿಗೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ತಾಂತ್ರಿಕ ಅನುಮೋದನೆ ನೀಡಲು ಸರ್ಕಾರದ ಆದೇಶ ಸಂಖ್ಯೆ:ನಅಇ 292 ಮೈಅಪ್ರಾ 2024, ದಿನಾಂಕ:07-08-2024 ರಂತೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿರುತ್ತದೆ. |

| | | |
|---|---|---|
| | | ಮುಂದುವರೆದು, ತಾಲ್ಲೂಕು ಪಂಚಾಯತಿ ಕಛೇರಿಯಲ್ಲಿಯೇ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಹಿಸಲು ಆದೇಶಿಸಲಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ, ಸದರಿ ಅರ್ಜಿಗಳನ್ನು ಕಾಲಮಿತಿಯೊಳಗೆ / ತ್ವರಿತವಾಗಿ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ. |
| (ಇ) | ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆಯ ಕುರಿತಂತೆ ಸಂಬಂಧಪಟ್ಟ ಇಲಾಖೆಗಳಾದ ಕಂದಾಯ, ಲೋಕೋಪಯೋಗಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಆರ್ ಡಿಪಿಆರ್ ಇತ್ಯಾದಿಗಳ ನಡುವೆ ಸಮನ್ವಯ ಸಾಧಿಸಲು ಸಮಾಲೋಚನೆ ಸಭೆ ನಡೆಸಲು ಯಾವಾಗ ಕ್ರಮವಹಿಸಲಾಗುವುದು. | ಬಡಾವಣೆ ನಕ್ಷೆ ಅನುಮೋದನೆ ನೀಡುವ ಸಂದರ್ಭದಲ್ಲಿ ಅಪೂರ್ಣ ದಾಖಲೆಗಳೊಂದಿಗೆ ಸ್ವೀಕೃತವಾಗಿರುವ, ನಿಯಮಾವಳಿಗಳನ್ವಯ ಸಲ್ಲಿಸದೇ ಇರುವ ಮತ್ತು ಕನಿಷ್ಟ ರಸ್ತೆ ಸಂಪರ್ಕ ಇತ್ಯಾದಿ ಮಾನದಂಡಗಳನ್ನು ಪೂರೈಸದಿರುವ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ. ಸೂಕ್ತ ದಾಖಲೆಗಳೊಂದಿಗೆ, ನಿಯಮಾವಳಿಗಳಂತೆ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅನುಮೋದನೆಗೆ ಕ್ರಮ ವಹಿಸಲಾಗುವುದು. |
| (ಈ) | ಕರಾವಳಿ ಜಿಲ್ಲೆಗಳ ಗ್ರಾಮೀಣದಲ್ಲಿ ಮಾರ್ಚ್ 04 2025 ರವರೆಗೆ 647 ಬಡಾವಣೆ ನಕ್ಷೆ ಅನುಮೋದನೆ ಕಡತಗಳನ್ನು ತಿರಸ್ಕರಿಸಿದ್ದು ಅವುಗಳನ್ನು ನಿವೇಶನದಾರರು ಸರಿಪಡಿಸುವ ಬಗೆ ಹೇಗೆ: ಈ ಕುರಿತ ಪರಿಹಾರ ಕ್ರಮಗಳೇನು: | ಭೂ ಪರಿವರ್ತನೆ ಜಮೀನಿನಲ್ಲಿ ಅನಧಿಕೃತವಾಗಿ ವಿಭಜಿಸಿರುವ ನಿವೇಶನಗಳಿಗೆ ಸರ್ಕಾರದಿಂದ "ಬಿ-ಖಾತ" ನೀಡುವುದಕ್ಕೆ ಅವಕಾಶ ಮಾಡಿಕೊಡಲಾಗಿರುತ್ತದೆ. |
| (ಉ) | ಭೂ ಪರಿವರ್ತಿತ ನಿವೇಶನ ವಿಭಜನೆ, 11 ಬಿ ನೀಡಿದ ಪ್ರಕರಣಗಳು, 2013 ರ ಹಿಂದಿನ ಕಟ್ಟಡಗಳು, ರಸ್ತೆ ಅಗಲೀಕರಣ, ಸಾರ್ವಜನಿಕ ರಸ್ತೆ ಮತ್ತು ರಸ್ತೆ ಜಾಗಗಳ ದೃಢೀಕರಣ ಇತ್ಯಾದಿ ಸಮಸ್ಯೆಗಳ ಕಾರಣ ಹೆಚ್ಚಿನ ನಿವೇಶನ ಅನುಮೋದನೆ ಕಡತಗಳು ತಿರಸ್ಕಾರವಾಗುತ್ತಿರುವುದನ್ನು ಸರಿಪಡಿಸಲು ಸರಕಾರ ಕೈಗೊಂಡ ಕ್ರಮಗಳೇನು? | 2013 ರ ಹಿಂದೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ನಿವೇಶನಗಳಿಗೆ ಕಟ್ಟಡ ಪರವಾನಿಗೆಯನ್ನು ನೀಡಲಾಗುತ್ತಿದೆ ಹಾಗೂ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿರುವ ನಿವೇಶನಗಳಿಗೆ ಕಟ್ಟಡ ಪರವಾನಿಗೆಯನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

ಕಡತ ಸಂಖ್ಯೆ: ನಅಇ 387 ಮೈಅಪ್ರಾ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು